# ಮಹಿಳೆಯರಲ್ಲಿ ಮೂತ್ರ ಹತೋಟಿಯಿಲ್ಲದ ಸಮಸ್ಯೆಗೆ TOT ಟೇಪ್ ಶಸ್ತ್ರಚಿಕಿತ್ಸೆ.



## ಮೂತ್ರ ಹತೋಟಿಯಿಲ್ಲದಿರುವಿಕೆ ಎಂದರೇನು ?

– ಡಾ. ಬಿ. ರಮೇಶ್

ಮೂತ್ರ ಹತೋಟಿಯಿಲ್ಲದಿರುವಿಕೆ ಎಂದರೆ ಮೂತ್ರವು ತನಗೆ ತಾನೆ ಜಿನುಗುವಿಕೆ ಅಥವಾ ವಿಸರ್ಜನೆಯಾಗುವಿಕೆ. ವಸ್ತಿಕುಹರದ ತಳಭಾಗದ ಮಾಂಸಖಂಡಗಳು ಮೂತ್ರಕೋಶಕ್ಕೆ ಆಸರೆಯಾಗಿರುತ್ತದೆ. ಸಾಮಾನ್ಯವಾಗಿ ಇದು ಮೂತ್ರಕೋಶವು ಮುಚ್ಚಿಕೊಂಡಿರಲು ಮತ್ತು ಅಗತ್ಯವಾದಾಗ ತೆರೆದುಕೊಳ್ಳಲು ನೆರವಾಗುತ್ತದೆ. ಈ ಮಾಂಸಖಂಡ ದುರ್ಬಲಗೊಂಡಾಗ ಸಾಮಾನ್ಯವಾಗಿ ಮೂತ್ರ ವಿಸರ್ಜನೆಯ ಅವಸರದ ಒತ್ತಡ ಉಂಟಾಗುತ್ತದೆ. ಮೂತ್ರಕೋಶದ ಮೇಲೆ ಅನಿರೀಕ್ಷಿತವಾಗಿ ಹೆಚ್ಚು ಒತ್ತಡ ಉಂಟಾದ ಸಂದರ್ಭದಲ್ಲಿ ಅದು ಮುಚ್ಚಿಕೊಂಡಿರುವುದಕ್ಕೆ ಬದಲಾಗಿ ತೆರೆದುಕೊಳ್ಳುವುದರಿಂದ ಅಲ್ಪ ಪ್ರಮಾಣದ ಮೂತ್ರ ಜಿನುಗುತ್ತದೆ. ಕೆಮ್ಮಿದಾಗ, ಸೀನಿದಾಗ, ನಗುವಾಗ, ವ್ಯಾಯಾಮ ಮಾಡುವಾಗ ಮುಂತಾದ ಸಾಮಾನ್ಯ ದಿನಚರಿ ಚಟುವಟಿಕೆಯ ಸಮಯದಲ್ಲಿ ಮೂತ್ರ ತಡೆಯಿಲ್ಲದೆ ಜಿನುಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಮೂತ್ರ ಜಿನುಗಿದಾಗ ಒಂದು ರೀತಿಯ ಮುಜುಗರ ಉಂಟಾಗುತ್ತದೆ.

ಹೆರಿಗೆಯ ನಂತರ ಈ ಸಮಸ್ಯೆ ಉಂಟಾದದ್ದೇ ಆದರೆ ಅದು ಬಹುಪಾಲು ಮಹಿಳೆಯರಲ್ಲಿ ಕೆಲ ಸಮಯದ ನಂತರ ಹತೋಟಿಗೆ ಬರುತ್ತದೆ. ಹತೋಟಿಯಿಲ್ಲದ ಮೂತ್ರ ವಿಸರ್ಜನೆಯ ಒತ್ತಡದ ತೊಂದರೆ ಇರುವ ಎಲ್ಲಾ ರೋಗಿಗಳಿಗು ಶಸ್ತ್ರಚಿಕಿತ್ಸೆ ಅವಶ್ಯವಿರುವುದಿಲ್ಲ. ವ್ಯಕ್ತಿಯ ದೈನಂದಿನ ಚಟುವಟಿಕೆಗಳ ಮೇಲೆ ಈ ತೊಂದರೆ ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆ ಎಂಬುದರ ಮೇಲೆ ಇದು ಅವಲಂಬಿತವಾಗಿರುತ್ತದೆ. ವಸ್ತಿ ಕುಹರದ ತಳಭಾಗದ ಮಾಂಸಖಂಡಗಳನ್ನು ಬಲಗೊಳಿಸಲು ವ್ಯಾಯಾಮ ಮಾಡುವುದು ಮುಂತಾದ ಇತರೆ ಚಿಕಿತ್ಸೆಗಳಿಂದಲೂ ಈ ತೊಂದರೆ ನಿವಾರಣೆಯಾಗದಿದ್ದರೆ ಮಾತ್ರ ಪರ್ಯಾಯವಾಗಿ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ.



ಶಸ್ತ್ರಚಿಕಿತ್ಸೆಯನ್ನು ಒಮ್ಮಿಂದೊಮ್ಮೆಲೆ ಮಾಡದೆ, ವಸ್ತಿ ಕುಹರದ ವ್ಯಾಯಾಮ, ತೂಕ ಕಡಿಮೆ ಮಾಡುವಿಕೆ, ದೀರ್ಘಕಾಲದಿಂದ ಬಾಧಿಸುವ ಕೆಮ್ಮಿನ ಚಿಕಿತ್ಸೆಯ ಪ್ರಾಥಮಿಕ ಪ್ರಯತ್ನ ಮಾಡುವುದು ಅಪೇಕ್ಷಣೀಯ. ಇದರಿಂದ ತೊಂದರೆ ನಿವಾರಣೆಯಾಗದಿದ್ದ ಪಕ್ಷದಲ್ಲಿ ಶಸ್ತ್ರಚಿಕಿತ್ಸೆ ಅನಿವಾ ರ್ಯವಾಗುತ್ತದೆ. ಶಸ್ತ್ರಚಿಕಿತ್ಸೆ ಮಾಡುವುದರಿಂದ ಮೂತ್ರಕೋಶದ ಹೊರವಿಸರ್ಜನೆ ನಾಳಕ್ಕೆ ಬೆಂಬಲ ದೊರಕಿ ಅದು ಅಗತ್ಯವಾದಾಗ ಮುಚ್ಚಿಕೊಂಡಿರಲು ನೆರವಾಗುತ್ತದೆ. ಮತ್ತು ಮೂತ್ರ ಜಿನುಗದಂತೆ ತಡೆಯುತ್ತದೆ.

ಹತೋಟಿಯಿಲ್ಲದ ಮೂತ್ರ ವಿಸರ್ಜನೆ ತೊಂದರೆಗೆ ಚಿಕಿತ್ಸೆ ಮಾಡಲು TOT ಟೇಪ್ ಆಪರೇಷನ್ ವಿಧಾನವನ್ನು (ಇದು ಇತ್ತೀಚೆಗೆ ಅಭಿವೃದ್ಧಿಪಡಿಸಿರುವ, ಅತ್ಯಂತ ಪರಿಣಾಮಕಾರಿಯಾದ ಕ್ರಮವಾಗಿದೆ.) ಅನುಸರಿಸಬೇಕಾಗುತ್ತದೆ ಮತ್ತು ಕೆಲವೇ ಕೇಂದ್ರಗಳಲ್ಲಿ ಮಾತ್ರ ದೊರೆಯುತ್ತದೆ. ಇತ್ತೀಚೆಗೆ tension free ವೆಜಿನಲ್ ಟೇಪ್ (ಟಿವಿಟಿ–0) ಶಸ್ತ್ರಚಿಕಿತ್ಸೆ ಬಳಕೆಗೆ ಬಂದಿದ್ದು, ಅದು ಪರಿಣಾಮಕಾರಿಯಾಗಿದೆ. ವೆಜಿನಲ್ ಟೇಪ್ ಶಸ್ತ್ರಚಿಕಿತ್ಸೆಯು ವಿಶೇಷ ರೂಪದ ಸಿಂಥೇಟಿಕ್ mesh ಅಳವಡಿಕೆ ಮಾಡುವುದಾಗಿದೆ. ಈ mesh ಅನ್ನು ಮೂತ್ರಕೋಶದ ಹೊರದ್ವಾರದ ಮಟ್ಟದಲ್ಲಿ ಅಳವಡಿಸಲಾಗುವುದು. ಅದು ಬೇಕಾದ ಸಂದರ್ಭದಲ್ಲಿ ಮೂತ್ರದ್ವಾರವನ್ನು ಮುಚುತ್ತದೆ. ಈ mesh ಜೀವನ ಪರ್ಯಂತ ವ್ಯಕ್ತಿಯ ದೇಹದ ಒಂದು ಭಾಗವಾಗಿ ಉಳಿದಿರುತ್ತದೆ.

**TOT ಟೇಪ್ ಶಸ್ತ್ರಚಿಕಿತ್ಸೆಯು ಬಹಳ ಸರಳವಾದುದು ಮತ್ತು ರೋಗಿಯು ಅದೇ ದಿನ ಮನೆಗೆ ಹೋಗಬಹುದು. ಮತ್ತು ಮೂರನೇ ದಿವಸದಿಂದಲೇ ಕೆಲಸ ಕಾರ್ಯಗಳನ್ನು ಮಾಡಬಹುದು. ಮಹಿಳೆಯರಲ್ಲಿ ಅನಿಯಂತ್ರಿತ ಮೂತ್ರ ವಿಸರ್ಜನೆಗೆ TOT ಟೇಪ್ ಶಸ್ತ್ರಚಿಕಿತೆ ಒಂದು ವರಮಾನವಾಗಿದೆ.**

## ಡಾ. ರಮೇಶ್ ಆಸ್ಪತ್ರೆ

No.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್, ರಾಜಾಜಿನಗರ
ಎಂಟ್ರನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು–10. ದೂ.ಸಂಖ್ಯೆ:080 23151873,
Mobile : 99000 31842 email : endoram2006@yahoo.in ,
www.laparoscopicsurgeries.com